AGRICULTURAL COLLEGE AT RAICHUR

997. Sri BAPU GOWDA RAYAPPA (Shahapur).—

Will the Minister for Agriculture and Forests be pleased to state:—

(a) whether Government has got any proposal to start Agricultural Colleges in the State;

(b) if so, the number of colleges they propose to start and the location of the said colleges;

(c) whether Government has got any proposal to start an Agricultural College at Raichur?

Sri K.H. PATIL (Minister for Agriculture and Forests).—

(a) No.

(b) Does not arise in view of reply to (a) above.

(c) The question of upgrading the existing Agricultural Polytechnic at Raichur into an Agricultural College or Agricultural Engineering College is under consideration.

ಶ್ರೀ ಬಾಪೂಗೌಡ ರಾಯಪ್ಪ.—ಸ್ವಾಮಿ, ತಾವು ಈ ಪ್ರಶ್ನೆಯ (ಅ) ಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ ಮತ್ತು ಇದೇ ಪ್ರಶ್ನೆಯ (ಇ) ಗೆ ಉತ್ತರ ವಾಗಿ ರಾಯಚೂರಿನಲ್ಲಿ ಈಗಿರುವ ಕೃಷಿ ಪಾಲಿಟೆಕ್ನಿಕ್‌ನ್ನು ಕೃಷಿ ಕಾಲೇಜು ಅಥವಾ ಕೃಷಿ ಇಂಜನೀಯರಿಂಗ್ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸುವ ವಿಷಯವು ಪರಿಶೀಲನೆ ಯಲ್ಲಿದೆ ಎಂದು ಹೇಳಿದ್ದೀರಿ. ಆದುದರಿಂದ ತಾವು ಈ ವರ್ಷದ ಹಣಕಾಸಿನ ವರದಿಯಲ್ಲೇ ಒಂದು ನಿರ್ದಿಷ್ಟವಾದ ನಿರ್ಣಯ ತೆಗೆದುಕೊಂಡು ರಾಯಚೂರಿನಲ್ಲಿ ಕೃಷಿ ಇಂಜನೀಯರಿಂಗ್ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತೀರಾ?

† ಶ್ರೀ ಕೆ. ಎಚ್. ಪಾಟೀಲ.—ನಾನು ಹೋದ ಸಲವೇ ಇದನ್ನು ಅಪ್‌ಗ್ರೇಡ್ ಮಾಡಬೇಕೆಂದು ಬರೆದಿದ್ದೇನೆ. ಆದರೆ ಕೆಲವು ಕಾರಣಗಳಿಂದ ಆಗಲಿಲ್ಲ. ಪುನಃ ನಾನು ಈ ವರ್ಷದಲ್ಲಿ ರಾಯಚೂರಿನಲ್ಲಿ ಈಗ ಇರುವ ಕೃಷಿ ಪಾಲಿಟೆಕ್ನಿಕನ್ನು ಕೃಷಿ ಕಾಲೇಜು ಅಥವಾ ಕೃಷಿ ಇಂಜನೀಯರಿಂಗ್ ಕಾಲೇಜನ್ನಾಗಿ ಮಾಡಲು, ಫುಲ್ ಫ್ಲೆಡ್ಜ್ ಕಾಲೇಜು ಮಾಡಲು ಬರೆದಿದ್ದೇವೆ. ಅದು ಈಗ ಫೈನಾನ್ಸ್ ಡಿಪಾರ್ಟಮೆಂಟ್‌ನಲ್ಲಿ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಎಚ್. ಹನುಮೇಗೌಡ — ರಾಯಚೂರಿನಲ್ಲಿರುವ ಕೃಷಿ ಪಾಲಿಟೆಕ್ನಿಕ್‌ನ್ನು ಕೃಷಿ ಕಾಲೇಜು ಅಥವಾ ಕೃಷಿ ಇಂಜನೀಯರಿಂಗ್ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸುವ ವಿಷಯವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಈಗ ಸುಮಾರು ೪–೫ ವರ್ಷಗಳ ಹಿಂದೆ ಹಿಂದಿನ ಸರ್ಕಾರ ಡಾಕ್ಟರ್ ಸೀತಾರಾಮು ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಒಂದು ಕಮೀಟಿ ಮಾಡಿ ಇದನ್ನು ಅಪ್‌ಗ್ರೇಡ್ ಮಾಡುವ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ ಎಂದು ನಾನು ಕೇಳಿದ್ದೇನೆ. ಆ ಕಮೀಟಿಯವರು ಏನು ವರದಿ ಕೊಟ್ಟಿದ್ದಾರೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ಈಗ ಕೆಲವು ವರ್ಷಗಳ ಹಿಂದೆ ಸರ್ವ ಶ್ರೀ ಎನ್. ಪಿ. ಪಾಟೀಲ್, ತಮ್ಮಯ್ಯ, ಜ್ವಾಲನಯ್ಯ ಮತ್ತು ರಾಯಚೂರು ಕಾಲೇಜಿನ ಪ್ರಿನ್ಸಿಪಾಲ ಒಳಗೊಂಡ ಒಂದು ಸಮಿತಿ ನೇಮಿಸಿತ್ತು. ಆ ಸಮಿತಿಯವರು ಇದನ್ನು ಅಪ್‌ಗ್ರೇಡ್ ಮಾಡುವ ಬಗ್ಗೆ ಸರ್ಕಾರದ ಯೋಚನೆ ಪ್ರಕಾರ ಸರಿಯಾಗಿದೆ ಎಂದು ಹೇಳಿದ್ದಾರೆ. ಅಲ್ಲದೆ ಅವರು ಎರಡು ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ಇದನ್ನು ಈ ಪಾಲಿಟೆಕ್ನಿಕ್ಕನ್ನೂ ಅಗ್ರಿಕಲ್ಚರಲ್ ಕಾಲೇಜನ್ನಾಗಿ ಅಪ್‌ಗ್ರೇಡ್ ಮಾಡಬೇಕು ಎಂದು ಹೇಳಿದ್ದಾರೆ. ಇನ್ನು ಕೆಲವರು ಇದನ್ನು ಅಗ್ರಿಕಲ್ಚರಲ್ ಇಂಜನೀಯರಿಂಗ್ ಕಾಲೇಜನ್ನಾಗಿ ಮಾಡಬೇಕು ಎಂದು ಹೇಳಿದ್ದಾರೆ. ಇವೆರಡನ್ನೂ ಮಾಡಿದರೆ ಸರ್ಕಾರಕ್ಕೆ ೧ ಕೋಟಿ ೩೬ ಲಕ್ಷ ರೂಪಾಯಿ ಖರ್ಚಾಗುತ್ತದೆ, ಒಂದು ಮಾಡಿದರೆ ೪೯ ಲಕ್ಷ ರೂಪಾಯಿ ಖರ್ಚಾಗುತ್ತದೆ. ಆದುದರಿಂದ ಈ ಬಗ್ಗೆ ಆಲೋಚನೆ ಮಾಡಿ ಇದನ್ನು ಅಗ್ರಿಕಲ್ಚರಲ್ ಇಂಜನೀಯರಿಂಗ್ ಕಾಲೇಜನ್ನಾಗಿ ಮಾಡುವುದು ಸೂಕ್ತ ಎಂದು ತೀರ್ಮಾನ ಮಾಡಿ ಈ ನಿರ್ಣಯ ಮಾಡಿದೆ.

ಶ್ರೀ ಗೋಪಿನಾಥ ಆರ್. ಸಾಂಡ್ರ.—ಸ್ವಾಮಿ, ಕಳೆದ ಸಾಲಿನಲ್ಲೇ ರಾಯಚೂರಿನಲ್ಲಿ ಕೃಷಿ ಇಂಜನೀಯರಿಂಗ್ ಕಾಲೇಜು ಮಾಡುತ್ತೇವೆ ಎಂದು ಹೇಳಿದಿರಿ. ಇದು ಇನ್ನೂವರೆಗೂ ಮಾಡಲಿಲ್ಲಾ. ಮತ್ತು ಈಗ ಇದೇ ಪ್ರಶ್ನೆ ಕೇಳಿದಾಗ ಈ ಸಲ ಮಾಡುತ್ತೇವೆ. ಎಂದು ಹೇಳುತ್ತೀರಿ. ಇದನ್ನು ಯಾವ ತಾರೀಖಿನಲ್ಲಿ, ಯಾವ ದಿವಸದಲ್ಲಿ, ಯಾವ ತಿಂಗಳಿನಲ್ಲಿ ಮಾಡುತ್ತೀರಾ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಕೆ. ಎಚ್. ಪಾಟೀಲ — ಸಾಧ್ಯವಾದಷ್ಟು ಬೇಗನೆ ಮಾಡಲು ಸರ್ಕಾರ ಪ್ರಯತ್ನ ಮಾಡುತ್ತದೆ.

Sri V. M. GHADI.—May I know whether there is any proposal to start an agriculture college in North Canara District ?

Mr. DEPUTY SPEAKER.—That is outside the scope of this Question.

ಶ್ರೀ ಸುಭಾಷ ಅಸ್ಕೂರೆ.—ಈ ಅಕಡಮಿಕ್ ಇಯರ್‌ನಲ್ಲಿ ಮಾಡುತ್ತೀರಾ?

Sri K. H. PATIL.—I Will try to do my best.

ಶ್ರೀ ಕೆ. ಎಚ್. ಹನುಮೇಗೌಡ.— ಸ್ವಾಮಿ, ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀ ಸೀತಾರಾಮರೆಡ್ಡಿಯವರು, ಆರಕೆರೆಯವರು ಸೇರಿ ಒಟ್ಟು ೫ ಜನರ ಒಂದು ಕಮಿಟಿ ಮಾಡಿದ್ದರು. ಆ ಕಮಿಟಿಯವರು ಈ ಬಗ್ಗೆ ಏನು ವರದಿ ಕೊಟ್ಟಿದ್ದಾರೆ ?

ಶ್ರೀ ಕೆ. ಎಚ್. ಪಾಟೀಲ.—ನೋಟೀಸ್.

ಶ್ರೀ ಎ. ಶರಣಪ್ಪ.—ಸ್ವಾಮಿ, ಜಗಜೀವನರಾಮು ಮಂತ್ರಿಗಳಾಗಿದ್ದಾಗ ಆ ಕಾಲದಲ್ಲೇ ಇದನ್ನು ಅಗ್ರಿಕಲ್ಚರಲ್ ಇಂಜನೀಯರಿಂಗ್ ಕಾಲೇಜು ಮಾಡುತ್ತೇವೆ ಎಂದು ಘೋಷಣೆ ಹೊರಡಿಸಿದರು. ತದನಂತರ ಅದರ ಹೆಸರನ್ನು ಬದಲಾವಣೆ ಮಾಡಿದರು. ಈಗ ಇದು ಇಷ್ಟು ವಿಳಂಬವಾಗುವುದಕ್ಕೆ ಕಾರಣ ಏನು ?

ಶ್ರೀ ಕೆ. ಎಚ್. ಪಾಟೀಲ.—ಅಂದಿನ ಸರ್ಕಾರದ ಅನಾಸಕ್ತಿ ಮತ್ತು ಧೋರಣೆಯೇ ಕಾರಣ.

Sri S. A. PATIL.—Is it the intention of the Government to convert all the polytechnic schools into colleges in the State ?

Sri K. H. PATIL.—That is not so. But looking to the trend of the people and the desire of the people there we would like to give them an agriculture college, preferably an agricultural engineering college so that it will benefit more people.

BUNDING OF SOUTHERN BRANCH OF KRISHNA RIVER

872. Sri A. SHARANAPPA (Deodurg).—

Will the Minister for Public Works and Electricity be pleased to state :—

a) whether it is a fact that the inhabitants of the villages Handhinal, Kadadarguddi, Yelgundi, Yergodi, Gonwantla and Guntagola are put to great hardship since two years due to the bunding of Southern Branch of Krishna river near Hirejawoor village in Lingsugur Raichur District, and as a result of which the flow of water has been completely closed ;